PES IAMS
education for the real world

ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಂಡಿರುವ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ)
ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ - 577 204 (ಕರ್ನಾಟಕ)

Phone : 8147053085

PES Institute of Advanced Management Studies
( Affiliated to Kuvempu University, Recognized by Govt. of Karnataka)

Website : pestrust.edu.in/pesiams

N H-206, Sagar Road, Shivamogga - 577 204 (Karnataka)

Date: 04-02-2020

# Guest Talk on "Intellectual Property Rights"

The PG Department of Commerce in association with IQAC organised a Guest talk on the topic **"Intellectual Property Rights"** On 04/02/2020, at Seminar Hall. The resource person was **Prof. B. M. Kumarswamy, Economist.**

The resource person emphasized that the role and importance of intellectual property rights in Indian economy. Further, he advised to the students and educational institutions conduct research activities in the field of intellectual property rights and also create awareness among public.

The guest lecture was very informative and the students were active throughout the lecture. The session started with an invocation song followed by a welcome address and inaugurated by lighting the lamp by all the respected dignitaries on the dais with students in the seminar hall. The session ended with a sincere gratitude to the guests on behalf of the PG Department of Commerce and proposed a vote of thanks. During the program Dr. S R Nagaraja, Coordinator of PG Department of Commerce, Dr. G. M. Sudarshan HOD, BBA & B.Com, Smt. Roopa D S HOD, BCA, Mr. G P Nagesh IQAC Coordinator and other staff members were also present at the program.

G.P Nagesh

Forum-Coordinator

Principal

Principal
PES Institute of Advanced Management Studies
NH 206, Sagar Road
SHIVAMOGGA-577 204.

PES IAMS ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)
ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ – 577 204 (ಕರ್ನಾಟಕ)

Phone : 8147053085

PES Institute of Advanced Management Studies
( Affiliated to Kuvempu University, Recognized by Govt. of Karnataka)
N H-206, Sagar Road, Shivamogga - 577 204 (Karnataka)

Website : pestrust.edu.in/pesiams

ದಿನಾಂಕ: 04/02/2020

**Intellectual Property Rights ಬಗ್ಗೆ ಅಜ್ಞಾನದಿಂದ ಭಾರತದ ಆರ್ಥಿಕ ಪ್ರಗತಿಗೆ ಅಡ್ಡಿ**
**ಪ್ರೋ ಬಿ.ಎಂ ಕುಮಾರಸ್ವಾಮಿ ಅಭಿಮತ**

**Intellectual Property Rights** ಬಗ್ಗೆ ಅಜ್ಞಾನದಿಂದ ಭಾರತದ ಆರ್ಥಿಕ ಪ್ರಗತಿಗೆ ಅಡ್ಡಿ ಉಂಟಾಗುತ್ತಿದೆ. ಮುಂದುವರಿದ ದೇಶಗಳು ಇದನ್ನು ದುರುಪಯೋಗಪಡಿಸಿಕೊಂಡು ಭಾರತದ ಅನೇಕ ಪ್ರಾಚೀನ ಪರಂಪರೆಯುಳ್ಳ ಪದಾರ್ಥಗಳನ್ನು ತಮ್ಮ ದೇಶದ ಸಂಶೋಧನೆ ಎಂಬಂತೆ ಬಿಂಬಿಸಿ ಅಪಾರ ಪ್ರಮಾಣದ ಹಣವನ್ನು ಗಳಿಸುತ್ತಿದ್ದಾರೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಪರಿಸರ ವಾದಿ ಪ್ರೋ ಬಿ.ಎಂ ಕುಮಾರಸ್ವಾಮಿ ಅಭಿಪ್ರಾಯಪಟ್ಟರು. ಅವರು ಪಿಇಎಸ್‌ಐಎಎಂಎಸ್ ಡಿಗ್ರಿ ಕಾಲೇಜಿನ PG Department of Commerce ನ ಸಹಯೋಗದಲ್ಲಿ IQAC ವತಿಯಿಂದ **"ಬೌದ್ಧಿಕ ಆಸ್ತಿ ಹಕ್ಕುಗಳು ಅನುಕೂಲಗಳು ಮತ್ತು ಸವಾಲುಗಳ" (Intellectual Property Rights: Issues and Privileges)** ಕುರಿತು ನಡೆದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.


ಮುಂದುವರೆದು ಮಾತನಾಡಿದ ಅವರು ಭಾರತದ ಶೈಕ್ಷಣಿಕ ವಲಯ ಹಾಗೂ ವಿದ್ಯಾರ್ಥಿಗಳು ಈ ವಿಚಾರದಲ್ಲಿ ಅಧ್ಯಯನ ಕೈಗೊಂಡು ಸಾರ್ವಜನಿಕ ವಲಯದಲ್ಲಿ ಇದರ ಬಗ್ಗೆ ಅರಿವು ಮೂಡಿಸಬೇಕೆಂದು ಕರೆ ನೀಡಿದರು. ಭಾರತದಲ್ಲಿ ಸಂಪನ್ಮೂಲಗಳು ಹೇರಳವಾಗಿದ್ದು ಹೆಚ್ಚಿನ ಸಂಶೋಧನೆಗಳನ್ನು ನಡೆಸಿ ದೇಶದ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಲು ಗಣನೀಯ ಕೊಡುಗೆ ನೀಡಬೇಕೆಂದರು. ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ಹಣವನ್ನು ನೀಡುತಿದ್ದು ಅಮೇರಿಕಾ ಹಾಗೂ ಐರೋಪ್ಯ ಒಕ್ಕೂಟ ದೇಶಗಳು ಸಾಕಷ್ಟು ಹಣವನ್ನು ಈ ಕ್ಷೇತ್ರಕ್ಕೆ ನೀಡುತ್ತಿದ್ದು ಪ್ರತೀ ವರ್ಷ ಶೇಕಡ 70 ಕ್ಕಿಂತ ಹೆಚ್ಚು Patent ಗಳಿಗೆ ಈ ದೇಶಗಳಿಂದಲೇ ಅರ್ಜಿ ಸಲ್ಲಿಕೆಯಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಗಂಭೀರ ಚಿಂತನೆ ನಡೆಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಕಾಂ ಸ್ನಾತಕೋತ್ತರ ವಿಭಾಗದ ಸಂಚಾಲಕರಾದ ಡಾ.ಎಸ್.ಆರ್ ನಾಗರಾಜರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎಂ ಸುದರ್ಶನ್, ಬಿಸಿಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರೂಪ ಡಿ.ಎಸ್, IQAC ಮುಖ್ಯಸ್ಥರಾದ ಶ್ರೀ ಜಿ.ಪಿ ನಾಗೇಶ್ ಹಾಗೂ ಬೋಧಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕುಮಾರಿ ಸಾವ್ಯ ಡಿ.ಎಸ್ ಸ್ವಾಗತಿಸಿ, ಕುಮಾರಿ ಸಮಂತ ಪಿ.ಆರ್ ಸಂಪನ್ಮೂಲ ವ್ಯಕ್ತಿಯನ್ನು ಪರಿಚಯಿಸಿ, ಕುಮಾರಿ ಅರ್ಚನ ವಂದಿಸಿ, ಕುಮಾರಿ ಸ್ನೇಹ ಆರ್.ಚೌಹಾಣ್ ನಿರೂಪಿಸಿದರು.

**Principal**
PES Institute of Advanced Management Studies
NH 206, Sagar Road
SHIVAMOGGA-577 204.






Co-ordinator
P.G. Department of Commerce
PES Institute of Advanced Management Studies
NH-206, Sagar Road, SHIVAMOGGA-577 204.

06/02/2020
Principal
PES Institute of Advanced Management Studies
NH 206, Sagar Road
SHIVAMOGGA-577 204.

07, ಫೆಬ್ರುವರಿ, 2020, ಶುಕ್ರವಾರ, ದಾವಣಗೆರೆ.

# ಬೌದ್ಧಿಕ ಆಸ್ತಿ ಬಗೆಗಿನ ಅಜ್ಞಾನ ಆರ್ಥಿಕ ಪ್ರಗತಿಗೆ ಅಡ್ಡಿ

ಸಂ.ಕ. ಸಮಾಚಾರ ಶಿವಮೊಗ್ಗ

ಬೌದ್ಧಿಕ ಆಸ್ತಿ ಬಗೆಗಿನ ಅಜ್ಞಾನದಿಂದ ಭಾರತದ ಆರ್ಥಿಕ ಪ್ರಗತಿಗೆ ಹಿನ್ನಡೆಯಾಗುತ್ತಿದೆ ಎಂದು ಅರ್ಥಶಾಸ್ತ್ರಜ್ಞ ಪ್ರೊ.ಬಿ.ಎಂ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಪಿಇಎಸ್‌ಐಎಎಂಎಸ್ ಡಿಗ್ರಿ ಕಾಲೇಜಿನಲ್ಲಿ ಗುರುವಾರ ಎಂಕಾಂ ಸ್ನಾತಕೋತ್ತರ ವಿಭಾಗದ ಸಹಯೋಗದಲ್ಲಿ ಐಕ್ಯೂಎಸಿ ವತಿಯಿಂದ 'ಬೌದ್ಧಿಕ ಆಸ್ತಿ ಹಕ್ಕುಗಳು, ಅನುಕೂಲಗಳು ಮತ್ತು ಸವಾಲುಗಳು' ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮುಂದುವರಿದ ದೇಶಗಳು ಇದನ್ನು ದುರುಪಯೋಗಪಡಿಸಿಕೊಂಡು ಭಾರತದ ಅನೇಕ ಪ್ರಾಚೀನ ಪರಂಪರೆಯುಳ್ಳ ಪದಾರ್ಥಗಳನ್ನು ತಮ್ಮ ದೇಶದ ಸಂಶೋಧನೆ ಎಂಬಂತೆ ಬಿಂಬಿಸಿ ಅಪಾರ ಪ್ರಮಾಣದ ಹಣವನ್ನು ಗಳಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.



ಭಾರತದ ಶೈಕ್ಷಣಿಕ ವಲಯ ಹಾಗೂ ವಿದ್ಯಾರ್ಥಿಗಳು ಈ ವಿಚಾರದಲ್ಲಿ ಅಧ್ಯಯನ ಕೈಗೊಂಡು ಸಾರ್ವಜನಿಕ ವಲಯದಲ್ಲಿ ಇದರ ಬಗ್ಗೆ ಅರಿವು ಮೂಡಿಸಬೇಕು. ಭಾರತದಲ್ಲಿ ಸಂಪನ್ಮೂಲಗಳು ಹೇರಳವಾಗಿದ್ದು ಹೆಚ್ಚಿನ ಸಂಶೋಧನೆಗಳನ್ನು ನಡೆಸಿ ದೇಶದ ಆರ್ಥಿಕ ಸಂಪನ್ಮೂಲ ಹೆಚ್ಚಿಸಲು ಗಣನೀಯ ಕೊಡುಗೆ ನೀಡಬೇಕು ಎಂದರು.

ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ಹಣವನ್ನು ವಿನಿಯೋಗಿಸುತ್ತಿದ್ದು, ಅಮೆರಿಕಾ ಹಾಗೂ ಐರೋಪ್ಯ ಒಕ್ಕೂಟ ದೇಶಗಳು ಸಾಕಷ್ಟು ಹಣವನ್ನು ಈ ಕ್ಷೇತ್ರಕ್ಕೆ ನೀಡುತ್ತಿದ್ದು, ಪ್ರತೀ ವರ್ಷ ಶೇ.70ಕ್ಕಿಂತ ಹೆಚ್ಚು ಪೇಟೆಂಟ್‌ಗಳಿಗೆ ಈ ದೇಶಗಳಿಂದಲೇ ಅರ್ಜಿ ಸಲ್ಲಿಕೆಯಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಗಂಭೀರ ಚಿಂತನೆ ನಡೆಸಬೇಕಾಗಿದೆ ಎಂದರು.


ಎಂಕಾಂ ಸ್ನಾತಕೋತ್ತರ ವಿಭಾಗದ ಸಂಚಾಲಕರಾದ ಡಾ.ಎಸ್.ಆರ್. ನಾಗರಾಜ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಜೆ.ಎಂ. ಸುದರ್ಶನ್, ಬಿಸಿಎ ವಿಭಾಗದ ಮುಖ್ಯಸ್ಥ ಡಿ.ಎಸ್. ರೂಪ, ಐಕ್ಯೂಎಸಿ ಮುಖ್ಯಸ್ಥ ಜೆ.ಪಿ. ನಾಗೇಶ್ ಇದ್ದರು.

---

ದಾವಣಗೆರೆ ಉದಯವಾಣಿ
ಶುಕ್ರವಾರ, ಫೆಬ್ರವರಿ 7, 2020

# ಆರ್ಥಿಕ ಪ್ರಗತಿಗೆ ಅಜ್ಞಾನ ಅಡ್ಡಿ

## ■ ವಿದೇಶಗಳಿಂದ ನಮ್ಮ ಸಂಶೋಧನೆಗಳ ನಕಲು: ಪ್ರೊ। ಕುಮಾರಸ್ವಾಮಿ



ಶಿವಮೊಗ್ಗ: ಪಿಇಎಸ್‌ಐಎಎಂಎಸ್ ಕಾಲೇಜಿನಲ್ಲಿ ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.

ಶಿವಮೊಗ್ಗ: ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್ ಬಗ್ಗೆ ಅಜ್ಞಾನದಿಂದ ಭಾರತದ ಆರ್ಥಿಕ ಪ್ರಗತಿಗೆ ಅಡ್ಡಿ ಉಂಟಾಗುತ್ತಿದೆ. ಮುಂದುವರಿದ ದೇಶಗಳು ಇದನ್ನು ದುರುಪಯೋಗಪಡಿಸಿಕೊಂಡು ಭಾರತದ ಅನೇಕ ಪ್ರಾಚೀನ ಪರಂಪರೆಯುಳ್ಳ ಪದಾರ್ಥಗಳನ್ನು ತಮ್ಮ ದೇಶದ ಸಂಶೋಧನೆ ಎಂಬಂತೆ ಬಿಂಬಿಸಿ ಅಪಾರ ಪ್ರಮಾಣದ ಹಣ ಗಳಿಸುತ್ತಿದ್ದಾರೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಪರಿಸರವಾದಿ ಪ್ರೊ। ಬಿ.ಎಂ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಪಿಇಎಸ್‌ಐಎಎಂಎಸ್ ಡಿಗ್ರಿ ಕಾಲೇಜಿನ ಪಿಜಿ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಸಹಯೋಗದಲ್ಲಿ ಐಕ್ಯೂಎಸಿ ವತಿಯಿಂದ 'ಬೌದ್ಧಿಕ ಆಸ್ತಿ ಹಕ್ಕುಗಳು ಅನುಕೂಲಗಳು ಮತ್ತು ಸವಾಲುಗಳು' ಕುರಿತು ನಡೆದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಭಾರತದ ಶೈಕ್ಷಣಿಕ ವಲಯ ಹಾಗೂ ವಿದ್ಯಾರ್ಥಿಗಳು ಈ ವಿಚಾರದಲ್ಲಿ ಅಧ್ಯಯನ ಕೈಗೊಂಡು ಸಾರ್ವಜನಿಕ ವಲಯದಲ್ಲಿ ಇದರ ಬಗ್ಗೆ ಅರಿವು ಮೂಡಿಸಬೇಕೆಂದು ತಿಳಿಸಿದರು.

ಭಾರತದಲ್ಲಿ ಸಂಪನ್ಮೂಲಗಳು ಹೇರಳವಾಗಿದ್ದು ಹೆಚ್ಚಿನ ಸಂಶೋಧನೆ ನಡೆಸಿ ದೇಶದ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಲು ಗಣನೀಯ ಕೊಡುಗೆ ನೀಡಬೇಕಿದೆ. ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ಹಣ ನೀಡುತ್ತಿದ್ದು ಅಮೆರಿಕಾ ಹಾಗೂ ಐರೋಪ್ಯ ಒಕ್ಕೂಟ ದೇಶಗಳು ಸಾಕಷ್ಟು ಹಣವನ್ನು ಈ ಕ್ಷೇತ್ರಕ್ಕೆ ನೀಡುತ್ತಿದ್ದು ಪ್ರತೀ ವರ್ಷ ಶೇ. 70 ಕ್ಕಿಂತ ಹೆಚ್ಚು ಪೇಟೆಂಟ್‌ಗಳಿಗೆ ಈ ದೇಶಗಳಿಂದಲೇ ಅರ್ಜಿ ಸಲ್ಲಿಕೆಯಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಗಂಭೀರ ಚಿಂತನೆ ನಡೆಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂಕಾಂ ಸ್ನಾತಕೋತ್ತರ ವಿಭಾಗದ ಸಂಚಾಲಕ ಡಾ। ಎಸ್.ಆರ್ ನಾಗರಾಜ ವಹಿಸಿದ್ದರು. ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ಜೆ.ಎಂ. ಸುದರ್ಶನ್, ಬಿಸಿಎ ವಿಭಾಗದ ಮುಖ್ಯಸ್ಥರಾದ ರೂಪ ಡಿ.ಎಸ್., ಐಕ್ಯೂಎಸಿ ಮುಖ್ಯಸ್ಥ ಜೆ.ಪಿ. ನಾಗೇಶ್ ಮತ್ತಿತರರು ಇದ್ದರು.

ಸಾವ್ಯ ಡಿ.ಎಸ್ ಸ್ವಾಗತಿಸಿ, ಸಮಂತ ಪಿ.ಆರ್ ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿದರು. ಅರ್ಚನ ವಂದಿಸಿ, ಸ್ನೇಹ ಆರ್.ಚೌಹಾಣ್ ಕಾರ್ಯಕ್ರಮ ನಿರೂಪಿಸಿದರು.

Principal
PES Institute of Advanced Management Studies
NH 206, Sagar Road
SHIVAMOGGA-577 204.